ಶ್ರೀ ಎಸ್.ಎಂ. ಶೀರನಾಳ ಚಂದ್ರಶೇಖರ್.— ದೇವರಹೊನ್ನಾಳಿ ಲಿಫ್ಟ್ ಇರಿಗೇಷನ್ ಸ್ಕೀಂ ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ ಎಂಬುದಾಗಿ ಹೇಳಿದೆ. ಅದಕ್ಕೇನಾದರೂ ಕಾಲ ಮಿತಿ ಇದೆಯೇ?

ಶ್ರೀ ಎಸ್. ಬಿ. ನಾಗರಾಳ್. —ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

APPOINTMENT OF ASSISTANT GOVERNMENT PLEADERS

184. Sri J. L. KABADE (Ballolli).—

Will the Minister for Law and Municipal Administration be pleased to state:—

(*a*) the rules for the appointment of Assistant Government Pleaders in the State;

(*b*) the requisite period of practice an Advocate is required to put in for being appointed to the post;

(c) the number of applicants for the said post from Bailhongal and Bijapur City;

(*d*) during last two years the particulars of applicants,, their qualifications and experiences?

Sri D. K. NAIKAR (Minister for Law and Municipal Administration).—

(*a*) Appointment of Assistant Government Pleaders in the State are made under the Karnataka Law Officers (Conditions of Service) Rules, 1973.

(*b*) The appointments of Assistant Government Pleaders are made from practising Advocates but no minimum period of practice is prescribed for being eligible for appointment as Assistant Government Pleaders.

(*c*) The number of applicants for the post of Assistant Government Pleaders from:

(1) Bailhongal	..	4
(2) Bijapur	..	5

(*d*) The qualifications and experience of these applicants are indicated in the Statement appended.

STATEMENT

Sl. No.	Name	Qualifications	Experience
	BAILHONGAL		
	Sriyuths.		
1	H. C. Angadi	B.A. (Hons), LL.B.	39 Years
2	C. N. Bhadrannavar	B.A., LL.B.	7 Years and 6 months
3	P. S. Gadag	B.Com., LL.B.	6 Years
4	J. K. Reza	M.A., LL.B.	3 Years
	BIJAPUR		
1	R. B. Kulkarni	M.A., LL.B.	11 Years
2	N. S. Patil	B.Com., LL.B.	4 Years and 8 months
3	B. F. Huddar	B.A. (Hon.), LL B.	...
4	S. C. Kandagal	B.A., LL.B.	5 Years
5	S. S. Angadi	B.A., LL.B.	3 Years and 5 months

ಶ್ರೀ ಜೆ. ಎಲ್. ಕಬಾಡಿ.—ಹಿಂದೆ 1939ರಲ್ಲಿ ಇದರ ಬಗ್ಗೆ ಒಂದು ರೂಲ್ಸ್ ಮಾಡಿದ ಮೇಲೆ ಪುನಃ ರೀ ಆರ್ಗನೈಜೇಷನ್ ಆಗುವಾಗ ಪುನಃ ಈ ರೂಲ್ಸ್ 1959ರಲ್ಲಿ ರಿಪೀಲ್ ಆಯಿತು. ಅಂದ ಮೇಲೆ ಪುನಃ ಈಗ 1974ರಲ್ಲಿ ಅದನ್ನು ರಿಪೀಲ್ ಮಾಡುವ ಅವಶ್ಯಕತೆ ಏನಿತ್ತು ?

† ಶ್ರೀ ಡಿ ಕೆ. ನಾಯ್ಕರ್.— ಮೊದಲನೆಯ ರೂಲ್ಸ್‌ನಲ್ಲಿರುವ ಪ್ರಕಾರ ಅನುಭವ ಏನಾಗಿದೆ, ನಂತರ ಏನು ಅನುಭವ ಬಂದಿದೆ ಎನ್ನುವುದನ್ನು ನೋಡಿ ಆದರ ಒಂದು ಆಧಾರದ ಮೇಲೆ ಯಾವುದು ಅಡ್ವಾಂಟೇಜಸ್ ಎಂಬುದನ್ನು ನೋಡಿಕೊಂಡು ಇರತಕ್ಕ ರೂಲ್ಸನ್ನು ಅಮೆಂಡ್‌ಮೆಂಟ್ ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಬೈಲಹೊಂಗಲ್ ಮತ್ತು ಬಿಜಾಪುರಗಳಲ್ಲಿ 4 ಮತ್ತು 5 ಅರ್ಜಿಗಳು ಬಂದಿವೆಯೆಂದು ಹೇಳಿದ್ದೀರಿ. ಅವುಗಳಲ್ಲಿ ನೇಮಕ ಮಾಡಿದಂಥ ಹುದ್ದೆಗಳೆಷ್ಟು, ಕೆಲವರು ಅರ್ಜಿಗಳನ್ನು ಕೊಡದಿದ್ದರೂ ಅಂತಹವರನ್ನು ನೇಮಕ ಮಾಡಿರುವುದು ನಿಜವಲ್ಲವೇ ?

ಶ್ರೀ ಡಿ. ಕೆ. ನಾಯ್ಕರ್.—ತಮ್ಮ ಪ್ರಶ್ನೆಯ ಪ್ರಕಾರ ಅರ್ಜಿಗಳು ಎಷ್ಟು ಎಂಬುದನ್ನು ತಿಳಿಸಲಾಗಿದೆ. ನಮಗೆ ಒಂದ ಅರ್ಜಿಗಳ ಮೇಲೆಯೇ ಸೆಲೆಕ್ಟ್ ಮಾಡಿದ್ದೇವೆ.

ಶ್ರೀ ಜೆ. ಎಲ್. ಕಬಾಡಿ.—ಈ ಹುದ್ದೆಗೆ ನೇಮಕ ಮಾಡುವಾಗ ಮಿನಿಮಂ ಅರ್ಹತೆ, ಅವರ ಪ್ರಶ್ನೆ ಮಾಡುವುದಿಲ್ಲವೆಂದು ಹೇಳಿದ್ದೀರಿ. ಈಗ ತಾನೇ ಪಾಸ್ ಮಾಡಿದಂಥ ಅಡ್ವೋಕೇಟ್ ಅವರ ಅರ್ಜಿ ಬಂದರೆ, ಅಂತಹವರನ್ನೂ ಸಹ ನೇಮಕ ಮಾಡುವುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಹಾಗೆ ಇಲ್ಲ. ಮಿನಿಮಂ ಬಿ.ಎ.ಎಲ್.ಎಲ್.ಬಿ. ಆಗಿರುವವರು ಇರಲಿಕ್ಕೇ ಬೇಕು. ಅವರ ಎಬಿಲಿಟಿ, ನಾರೆಡ್ಜ್ ಆಫ್ ಲಾ ಮತ್ತೆ ಎಕ್ಸ್‌ಪೀರಿಯನ್ಸ್— ಇವುಗಳನ್ನು ನೋಡಿಕೊಂಡು ನೇಮಕ ಮಾಡುತ್ತೇವೆಂದು ಹೇಳಿದ್ದೇವೆ. ಇದರ ಬಗ್ಗೆ ಬೇರೆ ಕಂಡೀಷನ್ಸ್ ಅಂದರೆ ಮಿನಿಮಂ ಪೀರಿಯಡ್ ಆಫ್ ಪ್ರಾಕ್ಟೀಸ್ ಎಷ್ಟೆಂದು ಕೇಳಿದ್ದಕ್ಕೆ, ಏನೂ ಅಂಥಾದ್ದು ಇಲ್ಲ ವೆಂದು ಹೇಳಿದೆ.

ಶ್ರೀ ಪಿ. ಬಿ. ಪಾಟೀಲ್.—ಇದರಲ್ಲಿ ಮಿನಿಮಂ ಪೀರಿಯಡ್ ಆಫ್ ಪ್ರಾಕ್ಟೀಸಿಂಗ್ ನಿಗದಿ ಮಾಡಿಲ್ಲ. ಲಾ ಪಾಸ್ ಮಾಡಿ ಬೋರ್ಡ್‌ಗೆ ಹಾಕಿರುತ್ತಾರೆ. ಅಂತಹವರನ್ನು ನೇಮಿಸುವುದು ವಿದಿತವಲ್ಲವೇ ?

ಶ್ರೀ ಡಿ. ಕೆ. ನಾಯ್ಕರ್.—ಹಾಗೇನೂ ಇಲ್ಲ. ಉತ್ತಮ ಕ್ವಾಲಿಫಿಕೇಷನ್ನು ಗಣನೆಗೆ ತೆಗೆದು ಕೊಂಡು ಅವರಿಗೆ ಪ್ರಾಕ್ಟೀಸ್ ಕಡಿಮೆ ಇದ್ದರೂ ಕೂಡ ಕೆಲವರನ್ನು ಡಿಸ್ಟ್ರಿಕ್ಟ್ ಜಡ್ಜ್ ಅಥವಾ ಡೆಪ್ಯುಟಿ ಕಮಿಷನರ್ ಅವರ ಶಿಫಾರಸ್ಸಿನ ಮೇಲೆ ನೇಮಕ ಮಾಡುತ್ತೇವೆ. ಕೇವಲ ಅನುಭವ ಇದೆ ಎಂದು ಹೇಳಿದರೆ ಅಥವಾ ಮಿನಿಮಂ ಪೀರಿಯಡ್ ಆಫ್ ಪ್ರಾಕ್ಟೀಸ್ ಇಡೆಯೆಂದು ಹೇಳಿದರೆ ಅಂಥವರನ್ನು ನೇಮಕ ಮಾಡುವುದಕ್ಕಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಉತ್ತಮ ಕ್ವಾಲಿಫಿಕೇಷನ್ಸ್ ಇರತಕ್ಕವರು ನಮಗೆ ಸಿಗದೇ ಇರಬಹುದು. ಆದರೂ ಆ ರೀತಿಯಾಗಿ ಒಂದು ಮಿನಿಮಂ ಪೀರಿಯಡ್ ಆಫ್ ಪ್ರಾಕ್ಟೀಸ್ ಎಂಬುದಾಗಿ ಇಡುವುದು ಒಳ್ಳೆಯದಲ್ಲವೆಂದು ಅನುಭವದಿಂದ ಅದನ್ನು ಕೈಬಿಟ್ಟಿದ್ದೇವೆ.

ಶ್ರೀ ಕೆ. ಸಿದ್ದಯ್ಯ.—ತಾವು ಉತ್ತರ ಕೊಡುವಾಗ ಇದರಲ್ಲಿ ಅಡ್ವಾಂಟೇಜಸ್ ಏನೆಂಬುದನ್ನು ನೋಡಿಕೊಂಡು ಮಾಡುತ್ತೇವೆಂದು ಹೇಳಿದಿರಿ. ಇದರಲ್ಲಿ ಅಡ್ವಾಂಟೇಜಸ್ ಏನು ಎಂಬುದನ್ನು ಹೇಳುವುದಕ್ಕೆ ಬರುವುದಿಲ್ಲ. ಪ್ರಾಕ್ಟೀಸಿಂಗ್ ಅಡ್ವೋಕೆಟ್ ಎಂಬುದನ್ನೇ ಅಡ್ವಾಂಟೇಜಸ್ ಎನ್ನುವ ರೀತಿಯಲ್ಲಿ ಕನ್ಸಿಡರೇಷನ್ನಿಗೆ ಇಟ್ಟುಕೊಂಡಿದ್ದೀರಾ ?

ಶ್ರೀ ಡಿ. ಕೆ. ನಾಯ್ಕರ್.—ಈಗಿನ ರೂಲ್ಸ್ ಪ್ರಕಾರ ಅವರು ಕೆಲವೊಂದು ಕಟ್ಟಳೆಗಳನ್ನು ಅನುಸರಿಸಿ ಕೆಲವು ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ನಡೆಸಿರಬೇಕೆಂದಿದೆ. ಅವರು ಅವರ ಪ್ರಕರಣವನ್ನು ಡಿಸ್ಟ್ರಿಕ್ಟ್ ಜಡ್ಜ್ ಮುಂದೆ ಯಾವ ರೀತಿಯಲ್ಲಿ ನಡೆಸುತ್ತಾರೆ, ಅವರ ನಾರೆಡ್ಜ್ ಮತ್ತು ಅವರ ಫುಟಿಂಗ್ ಯಾವ ರೀತಿ ಅಭ್ಯಸ ಇದೆಯೆಂಬುದನ್ನು ಗಣನೆಗೆ ತೆಗೆದುಕೊಂಡು ಡಿಸ್ಟ್ರಿಕ್ಟ್ ಜಡ್ಜ್ ಅವರು ಶಿಫಾರಸು ಮಾಡುತ್ತಾರೆ. ನಂತರ ಅವರ ಶಿಫಾರಸ್ಸಿನ ಮೇಲೆ ಅಪಾಯಿಂಟ್ ಮೆಂಟ್ ಮಾಡುತ್ತೇವೆ.

1-30 P.M.

ಶ್ರೀ ಎಂ. ಎಸ್. ಕೃಷ್ಣನ್.—ಇಷ್ಟೊಂದು ವರ್ಷಗಳ ಅನುಭವ ಇರಬೇಕೆಂದು ಇಲ್ಲದೆ ಇರುವುದರಿಂದ ಯಾರಾದರೂ ಅಡ್ವೋಕೇಟಾಗಿ ಹೊಸದಾಗಿ ಎನ್‌ರೋಲ್ ಆದವರಿಗೂ ಅವಕಾಶವಿದೆ ಎಂದು ಅರ್ಥ ಬರುವ ರೀತಿಯಲ್ಲಿದೆ. ಇಷ್ಟು ವರ್ಷಗಳ ಅನುಭವವಿರಬೇಕು ಎಂದು ನೀವಿಸುತ್ತಾರೆಯೇ ?

ಶ್ರೀ ಡಿ. ಕೆ. ನಾಯ್ಕರ್.—ನೇರವಾಗಿ ನೇಮಕಾತಿ ಮಾಡುವಾಗ ಹಾಗೆ ಹಾಕಬೇಕು. ನಾವು ಏನು ಮಾಡುತ್ತೇವೆಂದರೆ ಡಿಸ್ಟ್ರಿಕ್ಟ್ ಜಡ್ಜ್ ಶಿಫಾರಸು ಇಲ್ಲದೆ ನೇಮಕಾತಿ ಮಾಡುತ್ತಿಲ್ಲ. ಡಿಸ್ಟ್ರಿಕ್ಟ್ ಜಡ್ಜ್ ಅವರು ಹೊಸದಾಗಿ ಎನ್‌ರೋಲ್ ಆದವರನ್ನು ಶಿಫಾರಸು ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಕೋರ್ಟಿನಲ್ಲಿ ಯಾವ ರೀತಿ ಕೇಸುಗಳನ್ನು ಕಂಡಕ್ಟ್ ಮಾಡುತ್ತಾರೆ ಎನ್ನುವುದನ್ನು ನೋಡಿ ಶಿಫಾರಸು ಮಾಡುತ್ತಾರೆ. ಹೊಸದಾಗಿ ಬಂದವರನ್ನು ಶಿಫಾರಸು ಮಾಡುತ್ತಾರೆನ್ನುವ ಗೋಜೇ ಇಲ್ಲ.

ಶ್ರೀ ಜೆ. ಎಲ್. ಕಬಾಡಿ.—ಅಸಿಸ್ಟೆಂಟ್ ಗವರ್ನಮೆಂಟ್ ಪ್ಲೀಡರುಗಳನ್ನು ನೇಮಕ ಮಾಡುವಾಗ ಇಡೀ ರಾಜ್ಯದಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಮತ್ತು ಡೆಪ್ಯುಟಿ ಕಮಿಷನರ್ಸ್ ಅವರ ರೆಕಮೆಂಡೇಷನ್ ಪ್ರಕಾರ ಮಾಡುವಾಗ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ ಜನರನ್ನು ಶಿಫಾರಸು ಮಾಡಿದರೆ ನೇಮಿಸುತ್ತೇವೆಂದು ಇದೆ. ಅವರ ಪರ್ಸೆಂಟೇಜ್ ಸರಿಯಾಗಿ ಇರುವಂತೆ ನೋಡಿಕೊಳ್ಳುವುದಕ್ಕೋಸ್ಕರ ಇನ್ನು ಮುಂದಾದರೂ ಕಾನೂನು ಮಂತ್ರಿಗಳು ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಡಿ. ಕೆ. ನಾಯ್ಕರ್.—18 ಪರ್ಸೆಂಟ್ ಕೊಡಲೇಬೇಕೆಂದು ನಿಯಮದಲ್ಲಿಲ್ಲ. ಅಪ್ಲಿಕೇಷನ್‌ಗಳು ಬಂದಾಗ ಶಿಫಾರಸು ಬಂದಿರುವುದರಲ್ಲಿ ಅವರಿಗೆ ಶಿಫಾರಸು ಮಾಡಿದ್ದಲ್ಲಿ ನೇಮಕ ಮಾಡಿದ್ದೇವೆ. ಪಬ್ಲಿಕ್ ಪ್ರಾಸಿಕ್ಯೂಟರಾಗಿ ಮೈಸೂರಿನಲ್ಲಿ ಕೆಲಸ ಮಾಡುವವರು ಹರಿಜನರು, ಬಿದರೆಯಲ್ಲಿರುವವರೂ ಹರಿಜನರೇ, ಅನೇಕ ಕಡೆಗಳಲ್ಲಿ ಹರಿಜನರಿಗೆ ಕೊಡುತ್ತ ಬಂದಿದ್ದೇವೆ. 18 ಪರ್ಸೆಂಟ್ ಕೊಟ್ಟಿದ್ದಾರೆಯೋ ಇಲ್ಲವೋ ಎನ್ನುವ ಮಾಹಿತಿ ಇಲ್ಲ, ಮತ್ತು ರೂಲ್ಸ್ ಪ್ರಕಾರ ರಿಸರ್ವೇಷನ್ ಇಲ್ಲ.